ಶ್ರೀ ಎಂ. ಎಸ್. ಕೃಷ್ಣನ್.—ನಾನು ಕೊಟ್ಟಿರುವ ಆಕ್ಟನ್ನು ನೋಡಿ, ಇನ್ನೊಂದು ಸಾರಿ ಅಮೆಂಡ್‌ಮೆಂಟ್ ತೆಗೆದುಕೊಂಡು ಬರುವುದಾದರೆ ತೆಗೆದುಕೊಂಡು ಬನ್ನಿ.

ಶ್ರೀ ಜೆ. ಹೆಚ್. ಪಟೇಲ್.—ಇದಕ್ಕೆ ಏನೂ ಹಾನಿಯಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಆಗುತ್ತದೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ವಿಷಯಗಳನ್ನು ಹೇಳಿದ್ದೇನೆ. ಮತ್ತೆ ಕೆಲವು ವಿಷಯಗಳನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಆದರೆ ಇನ್ನೂ ಹೆಚ್ಚು ವಿಷಯಗಳನ್ನು ಬೇರೆ ಸಮಯದಲ್ಲಿ ಪ್ರಸ್ತಾಪ ಮಾಡುವುದಕ್ಕಾಗುತ್ತದೆ. ಆದುದರಿಂದ ಈ ವಿಧೇಯಕವನ್ನು ಈ ಸದನ ಒಪ್ಪಿಕೊಳ್ಳುತ್ತದೆ ಎಂದು ಭಾವಿಸುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ. ''೧೯೮೭ನೇ ಇಸವಿಯ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

೨ ರಿಂದ ೬ನೇ ಖಂಡಗಳು:

ಅಧ್ಯಕ್ಷರು.—''ಖಂಡ ೨ ರಿಂದ ೬ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ ೨ರಿಂದ ೬ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ.—

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವನ್ನು ಅಂಗೀಕರಿಸಲಾಯಿತು

(ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆ ಇವುಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ ೧೯೮೭ನೇ ಇಸವಿಯ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಮಂಡಿಸುತ್ತೇನೆ''.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ.—

''೧೯೮೭ನೇ ಇಸವಿಯ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಅನುಮೋದನೆ ನೀಡಲಾಯಿತು

ಖಾಸಗಿ ಸದಸ್ಯರುಗಳ ನಿರ್ಣಯಗಳು

ಪಾನನಿರೋಧದ ಬಗ್ಗೆ ಶಿಫಾರಸ್ಸು ಮಾಡಲು ಒಂದು ಉಚ್ಚ ಸಮಿತಿಯ ನೇಮಕ

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೇ, ಈ ಸಭೆಯಲ್ಲಿ ಬರುವ ವಿಷಯಗಳ ಬಗ್ಗೆ ಚಿಂತನೆ ಮಾಡಿ, ಬೆಳಕು ಚೆಲ್ಲತಕ್ಕಂಥಾದ್ದು ಒಳ್ಳೆಯದು. ಇವತ್ತು ಅನುಭವಿ ಸದಸ್ಯರಾದಂಥ ಮಾನ್ಯ ಶ್ರೀನಿವಾಸರೆಡ್ಡಿಯವರು ಮದ್ಯಪಾನದ ಬಗ್ಗೆ ಏನೊಂದು ನಿರ್ಣಯವನ್ನು ತಂದಿದ್ದಾರೆ, ಇದು

ಬಹಳ ಅರ್ಥಪೂರ್ಣವಾಗಿದೆ. ಈ ಸಭೆ ಚಿಂತನೆ ಮಾಡತಕ್ಕ ವಿಷಯವಾಗಿದೆ ಸರ್ಕಾರವು ಕೂಡ ಚಿಂತನೆ ಮಾಡತಕ್ಕಂಥ ವಿಷಯವಾಗಿದೆ. ಮದ್ಯಪಾನವನ್ನು ನಿಲ್ಲಿಸಬೇಕೆಂಬ ಮಾತನ್ನು ನಾನು ಒಪ್ಪುತಕ್ಕವನಲ್ಲ. ಈ ದೇಶದಲ್ಲಿಯೇ ಏಕೆ ಜಗತ್ತಿನಲ್ಲಿಯೇ ಸಾಧ್ಯವಾಗಿಲ್ಲ ನಮ್ಮ ದೇಶದಲ್ಲಿ ಪ್ರಯತ್ನ ಮಾಡಿದರು ಅದು ಸಾಧ್ಯವಾಗಲಿಲ್ಲ. ಮದ್ಯಪಾನ ಇವತ್ತು ಸಮಾಜ ಒಂದು ಅಂಗವಾಗಿದೆ. ೨೦೦೦ ವರ್ಷಗಳ ಹಿಂದೆ ಕೂಡ ಮದ್ಯಪಾನ ಇತ್ತು. ಇವತ್ತು ಸಮಾಜದ ವ್ಯವಸ್ಥೆ ಬಗ್ಗೆ ಚಿಂತನೆ ಮಾಡಿದಾಗ, ಕುಡಿಯದವನು ಹೋಗುತ್ತಾನೆ ಎಂದು ಹೇಳುತ್ತಾರೆ. ಈ ಸಂದರ್ಭದಲ್ಲಿ ಒಂದು ಪದ್ಯವನ್ನು ಹೇಳಬೇಕಾಗಿದೆ. ಅದೇನೆಂದರೆ,

ಕುಡುಕರೆಮ್ಮವರು ಎಮ್ಮ ಕುಡಿಪವರು ಯಾರಿಲ್ಲ
ಕುಡಿದ ಬೇವರ ಎಲ್ಲಾ ಪೂಜಿಪರು,
ಎಲ್ಲಾ ಮಾರಿ ಮಸಣಿಯ ಮುಂದೆ ಹೆಂಡವನ್ನು ಇಡುವರು,
ನಾವಿದನು ಕುಡಿದರೆ ಕುಡಕರು ಎನ್ನುವರು
ದೇವ ದೇವತೆಗಳು ಕುಡಿದರೆ ಮಧುಪಾನ ಎನ್ನುವರು
ನಾವದನ್ನು ಕುಡಿದರೆ ಸುರಪಾನ ಎನ್ನುವರು

ಸಮಾಜದ ವ್ಯವಸ್ಥೆಯಲ್ಲಿ ಇವತ್ತು ಮದ್ಯಪಾನ ಹಾಸುಹೊಕ್ಕಾಗಿದೆ. ಸುಮಾರು೨೦೦೦ ವರ್ಷಗಳ ಹಿಂದೆ ಕೌಟಿಲ್ಯ ತನ್ನ ಅರ್ಥಶಾಸ್ತ್ರದಲ್ಲಿ ಮದ್ಯಪಾನ ಯಾವ ವ್ಯವಸ್ಥೆಯಲ್ಲಿತ್ತು ಎಂಬುದನ್ನು ಬರೆದಿದ್ದಾನೆ. ಅದರಲ್ಲಿರತಕ್ಕ ಮೂರುನಾಲ್ಕು ವಿಷಯಗಳನ್ನು ಮಾತ್ರ ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ. ಮದ್ಯವನ್ನು ಮಿಶ್ರ ಮಾಡಿ ಮಾರುವವರಿಗೆ ಫೈನ್ ಹಾಕುತ್ತಿದ್ದರು.

> ' A fine of 600 panas shall be imposed on all offenders others than those who are manufacturers, purchasers, or sellers in liquor trafic'.

ಯಾರೂ ಪರವಾನಿಗೆ ಇಲ್ಲದೆ, ಮದ್ಯವನ್ನು ತಯಾರು ಮಾಡುತ್ತಿದ್ದರು ಅಂಥವರಿಗೆ ೨೦೦೦ ವರ್ಷಗಳ ಹಿಂದೆ ೬೦೦ ಪನಾಸ್ ದಂಡ ಹಾಕುತ್ತಿದ್ದರು. ಈ ಗ್ರಂಥದಲ್ಲಿ ಬರೆಯಲಾಗಿದೆ.

> 'Liquor shall no taken out of villages, nor shall Liquor shops be close to each other'.

ಇವತ್ತು ಅಂಗಡಿ ಪಕ್ಕದಲ್ಲಿ ಅಂಗಡಿ ಕೊಡುತ್ತಿದ್ದಾರೆ. ಸರ್ಕಾರದ ಯಾವ ಕಾನೂನನ್ನು ಪರಿಪಾಲನೆ ಮಾಡುತ್ತಿಲ್ಲ. ೨೦೦೦ ವರ್ಷದ ಹಿಂದೆಯೇ ಕೌಟಿಲ್ಯ ಇದನ್ನು ಬರೆದಿದ್ದಾನೆ.

> ' Liquor shall be sold to persons of well know character in such small quantities as one fourth or half a Kudumba, one Kudumba, half a prastha, or one prastha Those who are well know and of pure character may take liquor out of the shop.
>
> Or all may be compelled to drink liquor within the shops and not allowed to stir out at once.

ಕುಡಿದವನು ಅಂಗಡಿಯಿಂದ ತಕ್ಷಣ ಹೊರಗೆಹೋಗ ಕೂಡದು, ಅವನಿಗೆ ಏನಾದರೂ ಆಗುಲೇಬಿದ್ದು ಇದ್ದಂಥ ಸಂದರ್ಭದಲ್ಲಿ ಅವನು ಅಲ್ಲಿಯೇ ಇರಬೇಕು, ಅವನು ಹೊರಗೆ ಹೋಗಬಾರದೆಂದು ಕಾನೂನು ತಂದಿದ್ದರು. ಇವೊತ್ತು ಬಾರ್‌ಗಳು ನಮ್ಮಲ್ಲಿ ಜೇಕಾದಷ್ಟು ಇವೆ. ಅಲ್ಲಿಗೆ ಜನರು ಹೋಗಿ ಕುಡಿಯುತ್ತಾರೆ. ಅಲ್ಲಿ ಹೆಚ್ಚು ಕುಡಿದವರು ಗಡಿಯಾರ, ಸರ, ಇವುಗಳನ್ನೆಲ್ಲಾ ಕಳೆದುಕೊಳ್ಳತಕ್ಕಂಥದ್ದು ಇದೆ. ಆಗಿನ ವ್ಯವಸ್ಥೆ ಬಗ್ಗೆ ಹೇಳಬೇಕೆಂದರೆ, ಯಾರು ಕುಡಿಯುವುದಕ್ಕೆ ಹೋಗುತ್ತಿದ್ದರು ಅವರ ಒಂದು ಗೌರವವನ್ನು ಕಾಯ್ದುಕೊಳ್ಳುವಂಥ ಒಂದು ವ್ಯವಸ್ಥೆ ಆಗಿನ ಕಾಲದಲ್ಲಿ ಇತ್ತು

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ವೇದಾಂತ ಹೆಮ್ಮಿಗೆಯವರು ಕುಡಿಯುತ್ತಾರೋ ಇಲ್ಲವೋ ಗೊತ್ತಾಗಲಿಲ್ಲ.

ಶ್ರೀ ವೇದಾಂತ ಹೆಮ್ಮಿಗೆ.—ಯಾವತ್ತಾದರೂ ಒಂದು ದಿವಸ ನನ್ನ ಜೊತೆಗೆ ಸೇರಿಕೊಂಡರೆ ಆಗ ತಮಗೆ ಗೊತ್ತಾಗುತ್ತದೆ. ಇನ್ನು ಮುಂದೆ ಇದರಲ್ಲಿ ಏನು ಹೇಳಿದ್ದಾರೆ ಅಂದರೆ..... ' Spies stationed in the shops shall ascertain whether expenditure incurred by custmers in the shop is ordinary or extraordinary and also whether are any strangers. They shall also ascertain the value of the dress, ornaments, and gold of the customers lying there under intoxication. when customers under intoxication lose any of their things, the mearchants of the shop shall not only make good the loss, but also pay an equilent fine'.

ಯಾವನು ಈ ಮದ್ಯಪಾನ ವ್ಯಾಪಾರ ಮಾಡುತ್ತಾನೆ, ಅಲ್ಲಿ ಯಾವುದೇ ಒಬ್ಬ ಮನುಷ್ಯ ಕುಡಿದು ತನ್ನ ಯಾವುದೇ ಪದಾರ್ಥ ಕಳೆದುಕೊಂಡರೆ, ಆ ಒಂದು ಪದಾರ್ಥದ ಬೆಲೆ ಏನು ಆಗುತ್ತದೆ, ಅದನ್ನು ಆತ ಯಾವ ಅಂಗಡಿಗೆ ಹೋಗಿದ್ದ, ಆ ಅಂಗಡಿಯವನು ಕಟ್ಟಿಕೊಡಬೇಕು. ಅದರ ಜೊತೆಗೆ ಜುಲ್ಮಾನೆ ಕೂಡ ಕೊಡಬೇಕೆಂದು ಇದೆ. ಈ ರೀತಿ ಇಲ್ಲಿ ಯಾವ ಬಾರ್‌ನಲ್ಲಿ ಇದೆ. ಇವತ್ತು ಸ್ಕಾಚ್ ವಿಸ್ಕಿ ರಾಯಲ್ ಸಲ್ಯೂಟ್, ಪೀಟರ್ ಸ್ಕಾಚ್ ಎಂದು ಹೇಳಬಹುದು. ಎರಡು ಸಾವಿರ ವರ್ಷದ ಹಿಂದೆಯೇ Of various kinds of liquor, such as medaka, prasanna, asava, arista, maireya, and madhu, ಇಷ್ಟು ಲಿಕ್ಕರ್ಸ್ ಎರಡು ಸಾವಿರ ವರ್ಷಗಳ ಹಿಂದೆಯೇ ಇತ್ತು. ಈಗ ನಾವು ಇಲ್ಲಿ ಬೇರೆ ಬೇರೆ ಹೆಸರನ್ನು ಇಟ್ಟುಕೊಂಡಿದ್ದೇವೆ. ನಮಗೆ ಬೇಕಾದಂಥ ಹೆಸರುಗಳನ್ನು ಇಟ್ಟುಕೊಂಡಿದ್ದೇವೆ. ಎರಡು ಸಾವಿರ ವರ್ಷದ ಹಿಂದೆ ಸಮಾಜದಲ್ಲಿ ಹೊಂದಿಕೊಂಡ ವ್ಯವಸ್ಥೆ ಈ ಮದ್ಯಪಾನ. ಇವೊತ್ತು ಇದನ್ನು ತೆಗೆಯುತ್ತೇವೆಂದು ಹೇಳತಕ್ಕ ಪ್ರಯತ್ನ ಏನಿದೆ ಅದು ಯಾವತ್ತು ಸಫಲವಾಗುವುದಿಲ್ಲ. ಮದ್ಯಪಾನ ವ್ಯವಸ್ಥೆ ಸುಧಾರಣೆ ಆಗಬೇಕು ನಾವು ಸಮಾಜದ ಜನರಿಂದ ಓಟುಗಳನ್ನು ಪಡೆದುಕೊಂಡು ಬಂದಿದ್ದೇವೆ. ಆದುದರಿಂದ, ಕುಡಿಯುವವರಿಗೆ ಒಳ್ಳೆಯ ಹೆಂಡ, ವಿಸ್ಕಿ, ಸಾರಾಯಿ ಕೊಡುವಂಥ ವ್ಯವಸ್ಥೆಯಾಗಬೇಕು. ಇದರ ಬಗ್ಗೆ ಚಿಂತನೆಯಾಗಬೇಕೆಂದು ಹೇಳುತ್ತೇನೆ. ಇನ್ನು ಈ ಮದ್ಯದಲ್ಲಿ ಕಲಬೆರಿಕೆ ಆಗತಕ್ಕದ್ದು ಹೇಳಬೇಕೆಂದರೆ ಇದಕ್ಕೆ ಪಂಚಸೂತ್ರ ಇಟ್ಟುಕೊಂಡಿದ್ದೇವೆ. ಪುಡ್ ಅಡಲ್ಟ್ರೇಷನ್, ಪೊಲಿಟಿಕಲ್ ಅಡಲ್ಟ್ರೇಷನ್ ಮೆಡಿಷನ್ ಅಡಲ್ಟ್ರೇಷನ್ ಲಿಕ್ಕರ್ ಅಡಲ್ಟ್ರೇಷನ್ ಇಷ್ಟು ಅಡಲ್ಟ್ರೇಷನ್ ನಮ್ಮ ಸಮಾಜದಲ್ಲಿ ಆಂಟಿಕೊಂಡಿದೆ. ಈ ಬಗ್ಗೆ ಮಾಲ್ಯ ಕಳೆದುಕೊಂಡಿದ್ದೇವೆ. ಮಾನ್ಯ ಶ್ರೀನಿವಾಸ್ ಅವರು ಲಿಕ್ಕರ್ ಅಡಲ್ಟ್ರೇಷನ್ ಆಗುತ್ತಿರುವ ಬಗ್ಗೆ ಸುಧಾರಣೆ ಆಗಬೇಕೆಂದು ಹೇಳುವಂಥ ವಿಚಾರ ಏನು ಇದೆ. ಆದು ನಿಜವಾಗಿಯೂ ಕೂಡ ಒಳ್ಳೆಯ ಪ್ರಯತ್ನ. ಇದಕ್ಕೆ ಸಂಬಂಧಪಟ್ಟ ಸಚಿವರು ಇಲ್ಲೇ ಇದ್ದಾರೆಂದು ತಿಳಿದುಕೊಂಡು ಒಂದು ಮಾತನ್ನು ಹೇಳಬೇಕಾಗಿದೆ ಇವೊತ್ತು ಬೆಂಗಳೂರಿನಲ್ಲಿ ನಮ್ಮ ಸ್ನೇಹಿತರು ಹೇಳುತ್ತಾ ಬೆಂಗಳೂರಿನಲ್ಲಿ ಎಲ್ಲಿ ಕೇಳಿದರೂ ವಿದೇಶಿ ಮದ್ಯ ತೆಗೆದುಕೊಳ್ಳುತ್ತಿದ್ದಾರೆಂದು ಹೇಳಿದರು. ಆದರಲ್ಲಿ ಇರುವುದು ಬೆಂಗಳೂರು ಮದ್ದು. ಈ ಇಲಾಖೆ ಇರುವುದು ಮದ್ದು ತಯಾರಾಗಿದ್ದು ನೋಡಲಿಕ್ಕೆ, ಅವರೇ ಈ ಮದ್ದು ಕುಡಿದು ಮಲಗಿದ್ದಾರೇನೋ ಎಂದು ನನಗನಿಸುತ್ತದೆ.

ಬೆಂಗಳೂರಿನಲ್ಲಿ ಒಳ್ಳೆಯ ಪದಾರ್ಥಗಳು ಸಿಕ್ಕಬಹುದು. ಅದರೆ ಕಚ್ಚಾ ಪದಾರ್ಥಗಳನ್ನು ತಯಾರು ಮಾಡುವವರಿಗೆ ಶಿಕ್ಷಣವಾಗಬೇಕು. ಮಾನ್ಯ ಸದಸ್ಯರಾದ ಶ್ರೀನಿವಾಸ್‌ರವರು ತಂದಿರತಕ್ಕ ನಿರ್ಣಯದಲ್ಲಿ ಒಳ್ಳೆಯ ತತ್ವ ಇದೆ. ಲಿಕ್ಕರ್ ಲಾಬಿ ಏನಿದೆ ಇದು ಕೇವಲ ಯಾರೋ ಒಬ್ಬಿಬ್ಬರ ಕೈಸೇರಿ ಹೋಗಿ ಆಗಬಾರದ ಅನಾಹುತವಾಗುವುದಕ್ಕೆ ಬದಲಾಗಿ ನಾವು ಈಗ ಯಾವ ರೀತಿ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತ್‌ಗಳನ್ನು ಮಾಡಿ ಜನರ ಕೈಗೆ ಅಧಿಕಾರ ಕೊಡಬೇಕೆಂದು ಮಾಡಿದ್ದೇವೆ ಈ ರೀತಿಯಲ್ಲಿ ಲಿಕ್ಕರ್ ವ್ಯವಸ್ಥೆಯಲ್ಲಿ ಕೂಡ ಆಗಬೇಕು. ಯಾರೋ ಒಬ್ಬಿಬ್ಬರ ಕೈಗೆ ಇದು ಸಿಕ್ಕಿ ಇವತ್ತು ಅವರು ರಾಜಕಾರಣ ಮಾಡಿಕೊಂಡು ಸರ್ಕಾರವನ್ನೇ ಅಲ್ಲಾಡಿಸುವ ಕೆಲಸ ಆಗುತ್ತಿದೆ. ನನ್ನ ಪುಟ್ಟಿಗೆ ಹೇಳುವುದಾದರೆ ಇದು ಹೋಗಬೇಕು. ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗಬೇಕು.

ಮದ್ಯಪಾನದ ಬಗ್ಗೆ ಈ ವ್ಯವಸ್ಥೆ ಏರ್ಪಡಬೇಕು. ಮಾನ್ಯ ಸದಸ್ಯರಾದ ಶ್ರೀನಿವಾಸ್‌ರವರು ತಂದಿರತಕ್ಕ ಈ ನಿರ್ಣಯ ಬಹಳ ಸಾದುವಾದ, ಅರ್ಥಪೂರ್ಣವಾದ ಮತ್ತು ಆಳವಾಗಿ ಚಿಂತನೆ ಮಾಡತಕ್ಕದ್ದಾಗಿದೆ. ಇದು ಸರ್ಕಾರದ ಹಿತದೃಷ್ಟಿಯಿಂದ ಮಾತ್ರವಲ್ಲ ಸಮಾಜದ ಹಿತದೃಷ್ಟಿಯಿಂದಲೂ ಕೂಡ ವ್ಯವಸ್ಥಿತವಾಗಿ ನಡೆಯಬೇಕೆಂಬುದು ನನ್ನ ಇಚ್ಛೆ. ಈ ನಿರ್ಣಯದ ಬಗ್ಗೆ ಈ ಸಭೆಯ ಒಂದು ಸಮಿತಿಯನ್ನು ಮಾಡಿ ಕರ್ನಾಟಕ ರಾಜ್ಯದಲ್ಲಿ ಮದ್ಯಪಾನವು ಒಂದು ಶಿಸ್ತಿನಿಂದ, ನೀತಿಯುತವಾಗಿ ಒಂದು ತತ್ವದ ಆಧಾರದ ಮೇಲೆ ಪ್ರಾಮಾಣಿಕವಾದ ರೀತಿಯಲ್ಲಿ ವಿಕೇಂದ್ರೀಕರಣವಾಗಬೇಕು. ಸರ್ಕಾರಕ್ಕಾಗಲಿ, ಸಮಾಜಕ್ಕಾಗಲಿ, ಅಥವಾ ವ್ಯಕ್ತಿಗಾಗಲಿ ಅನ್ಯಾಯವಾಗದಂತೆ ನ್ಯಾಯಯುತವಾಗಿ ನಡೆಯಬೇಕು. ಈ ದೃಷ್ಟಿಯಲ್ಲಿ ಮಾನ್ಯ ಶ್ರೀನಿವಾಸ್‌ರವರು ಒಳ್ಳೆಯ ನಿರ್ಣಯವನ್ನು ತಂದಿದ್ದಾರೆ ಆದ್ದರಿಂದ ನಾನು ಇದನ್ನು ಸ್ವಾಗತಿಸಿ ಈ ಮಾತನ್ನು ಹೇಳುತ್ತಿದ್ದೇನೆ. ಯಾರಾದರೂ ಕುಡಿಯಲಿ ಅಥವಾ ಬಿಡಲಿ ಆ ಪ್ರಶ್ನೆ ಮುಖ್ಯವಲ್ಲ. ಆದರೆ ಕುಡಿಯುವವರು ಒಳ್ಳೆಯದನ್ನು ಕುಡಿಯಲೆಂದು ಹೇಳಬಯಸುತ್ತೇನೆ.

† ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ (ಆಥಣಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀನಿವಾಸ್‌ರವರು ತಂದಿರತಕ್ಕ ನಿರ್ಣಯದ ಬಗ್ಗೆ ಸದನದಲ್ಲಿ ನಗುವುದು ಸರಿಯಲ್ಲ. ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿ ಹಣ ಒಂದು ಕಡೆಯಲ್ಲಿ ಬರಬಹುದು ಆದರೆ ಅದೇ ಸಂದರ್ಭದಲ್ಲಿ ಕೋಟ್ಯಾಂತರ ಸಂಸಾರಗಳು ಹಾಳಾಗುತ್ತಿರುವುದನ್ನು ತಡೆಗಟ್ಟುವುದು ಹೇಗೆ ಎಂಬುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರಾದ ಹೆಮ್ಮಿಗೆಯವರು ಮಾತನಾಡುವಾಗ ಬಹಳ ಅರ್ಥಪೂರ್ಣವಾಗಿ ಮಾತನಾಡಿದ್ದಾರೆ. ಇವತ್ತು ಮದ್ಯಪಾನವನ್ನು ವ್ಯವಸ್ಥಿತವಾಗಿ ಯಾರು, ಎಲ್ಲ, ಯಾವ ರೀತಿ ಮಾಡಬೇಕೆಂಬ ಬಗ್ಗೆ ಮಹಿಳೆಯಾಗಿ ನಾನು ಮಾತನಾಡುವುದಾದರೆ ಇವತ್ತು ಕೋಟ್ಯಾಂತರ ಸಂಸಾರಗಳು ಹಾಳಾಗಿ ಮನೆಯಲ್ಲಿರತಕ್ಕ ಹೆಣ್ಣುಮಕ್ಕಳು, ಗಂಡುಮಕ್ಕಳು ಅಥವಾ ಹಿರಿಯರು ದುರಭ್ಯಾಸಕ್ಕೆ ಸಿಕ್ಕಿ ಅವರು ತಮ್ಮ ಆರ್ಥಿಕ ಮಟ್ಟದಿಂದ ಮೇಲೆ ಬರುವುದಕ್ಕೆ ತೊಂದರೆಯಾಗಿದೆಯೆಂದು ಹೇಳಬಯಸುತ್ತೇನೆ. ಇದರಲ್ಲಿ ನಾವು ಯಾರೂ ಕೂಡ ರಾಜಕೀಯ ಬಣ್ಣವನ್ನು ಬಳಿಯುವುದು ಬೇಡ. ವಿದೇಶೀ ಮದ್ಯವನ್ನು ಕುಡಿಯುವವರಿಗೆ ಸಾಕಷ್ಟು ಹಣ ಇರುತ್ತದೆ, ಅವರಿಗೆ ಶಕ್ತಿ ಇರುತ್ತದೆ ಆದರೆ ಹಳ್ಳಿಯಲ್ಲಿ ಇರತಕ್ಕ ಮುಗ್ಧ ಜನರು ಈ ಕುಡಿತದ ಚಟಕ್ಕೆ ಸಿಕ್ಕಿ ತಮ್ಮ ಸಂಸಾರಗಳನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಹಿಂದುಳಿದ ವರ್ಗದ ಅನೇಕ ಸಂಸಾರಗಳಲ್ಲಿರುವ ಹೆಣ್ಣುಮಕ್ಕಳು ಈ ಚಟಕ್ಕೆ ಬಲಿಯಾಗುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಕೇವಲ ಹಿಂದುಳಿದ ಜನಾಂಗದ ಮಹಿಳೆಯರು ಮಾತ್ರ ಕುಡಿಯುತ್ತಿಲ್ಲ.....

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ದೊಡ್ಡವರು ಶ್ರೀಮಂತರು ಕುಡಿದರೆ ಅದರಿಂದ ನಮಗೇನೂ ಬಾಧಕವಿಲ್ಲ. ಆದರೆ ಹಿಂದುಳಿದ ವರ್ಗದ ಜನರೂ ಕುಡಿಯುತ್ತಿದ್ದಾರೆ....

ಶ್ರೀ ಎಸ್. ಬಂಗಾರಪ್ಪ.—ಹಿಂದುಳಿದ ಜಾತಿಯವರಿಗಿಂತ ಹೆಚ್ಚಾಗಿ ಉಚ್ಚ ಜಾತಿಯವರೂ ಕುಡಿಯುತ್ತಿದ್ದಾರೆ.

ಶ್ರೀ ಆರ್.ಎ. ನಾಯಕ್.—ಹಳ್ಳಿಯಲ್ಲಿ ಹೆಂಗಸರು ಕುಡಿಯುತ್ತಾರೆಂದು ನಿಮಗೆ ಗೊತ್ತೆ ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಇದು ನಗುವಂಥ ವಿಷಯವಲ್ಲ. ಬಡವರನ್ನು ಆರ್ಥಿಕ ಮಟ್ಟದಿಂದ ಮೇಲಕ್ಕೆ ಎತ್ತಬೇಕಾದರೆ ಕುಡಿತವನ್ನು ಅಡಿಮೆ ಮಾಡಬೇಕು. ಕುಟುಂಬದಲ್ಲಿ ಮಿತವ್ಯಯ ಆಗಬೇಕು ಎನ್ನುವುದರ ಬಗ್ಗೆ ಸಮಗ್ರವಾದ ಚಿಂತನೆಯಾಗಬೇಕು. ಇಂದು ಸರ್ಕಾರ ಯಾವುದೇ ಇರಲಿ ಬಡ ಜನತೆಗೆ ಸಾಕಷ್ಟು ಸೌಲಭ್ಯಗಳನ್ನು ಕೊಡುತ್ತಿರುವಾಗ, ಕೈಗೆ ಉತ್ಪಾದನೆ ಮಾಡತಕ್ಕಂಥ ಉದ್ಯೋಗವನ್ನು ಒದಗಿಸಿಕೊಟ್ಟಾಗ ಶಕ್ತಿಯಿಂದ ದುಡಿದು ಸಂಪಾದನೆ ಮಾಡಬೇಕು. ಹೀಗೆ ದುಡಿದಂತಹ ಹಣವನ್ನು ಕುಡಿತಕ್ಕೆ ದುರುಪಯೋಗಪಡಿಸಿಕೊಂಡರೆ ಆತನನ್ನು ಬಡತನದ ರೇಖೆಯಿಂದ ಯಾವ ರೀತಿ ಮೇಲಕ್ಕೆ ಎತ್ತಲು ಸಾಧ್ಯವಾಗುತ್ತದೆ ? ಇದರ ಬಗ್ಗೆ ಚಿಂತನೆ ಮಾಡಬೇಕು. ಈವತ್ತಿನ ದಿವಸ ಹೆಣ್ಣು ಮಕ್ಕಳೂ ಕೂಡ ಕುಡಿತದ ಚಟಕ್ಕೆ ಬಿದ್ದಿರುತ್ತಾರೆ. ಇವತ್ತಿನ ದಿವಸ ಮದ್ಯದ ಅಂಗಡಿಗಳಿಗೆ ಲೈಸೆನ್ಸ್‌ಗಳನ್ನು ಕೊಡುತ್ತಿರುವುದು ನೋಡಿದರೆ ಕಾಫಿ, ಟೀ ಅಂಗಡಿಗಳಿಗೆ ಲೈಸೆನ್ಸ್‌ಗಳನ್ನು ಕೊಡುತ್ತಿರತಕ್ಕಂಥ ರೀತಿಯಲ್ಲಿ ಕೊಡುತ್ತಿರುತ್ತಾರೆ. ಇದನ್ನು ನಿಲ್ಲಿಸಬೇಕು. ಈ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕುಡಿತದ ಚಟಕ್ಕೆ ಒಳಗಾದವರು ಯಾವುದೇ ಕ್ಷೇತ್ರದಲ್ಲಿ ದುಡಿಯುತ್ತಿರಲಿ, ದುಡಿದು ಸಂಪಾದನೆ ಮಾಡಿದ ಹಣವನ್ನು ಮನೆಗೆ ನೇರವಾಗಿ ತೆಗೆದುಕೊಂಡು ಹೋಗುವುದಿಲ್ಲ. ಇವೆಲ್ಲ ಕಾರಣಗಳಿಂದಾಗಿ ಕುಟುಂಬದವರಿಗೆ ಯಾವ ರೀತಿ ಆದಾಯವನ್ನು ಕೊಡಲಿಕ್ಕೆ ಸಾಧ್ಯ ಎನ್ನುವ ಬಗ್ಗೆ ಒಂದು ಉನ್ನತ ಸಮಿತಿಯನ್ನು ಮಾಡಬೇಕೆಂದು ಮಾನ್ಯ ಶ್ರೀನಿವಾಸ್‌ರವರು ಏನು ಹೇಳಿದ್ದಾರೆ ಅದರ ಬಗ್ಗೆ ಬಹಳವಾಗಿ ಯೋಚನೆ ಮಾಡಬೇಕಾಗಿದೆ. ಆದಾಯ ಬರತಕ್ಕಂಥ ವಿಷಯ ಒಂದು ಭಾಗವಾದರೆ, ಬಡತನದ ರೇಖೆಯಿಂದ ಅವರನ್ನು ಮೇಲಕ್ಕೆ ಎತ್ತಬೇಕು ಎನ್ನುವ ವಿಷಯವನ್ನು ಬಹಳ ಲಘುವಾಗಿ ತೆಗೆದುಕೊಳ್ಳಕ್ಕಂಥದ್ದಲ್ಲ. ಇದು ಗಹನವಾಗಿ ತೆಗೆದುಕೊಳ್ಳತಕ್ಕ ವಿಚಾರ ಇದಕ್ಕಾಗಿ ಕಾಯಿದೆಯಲ್ಲಿ ಬದಲಾವಣೆ ಮಾಡತಕ್ಕ ಪರಿಸ್ಥಿತಿ ಬಂದರೂ ಕೂಡ ಮಾಡಬೇಕಾಗುತ್ತದೆಂದು ಕಳಕಳಿಯಿಂದ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ನಿಯಮ ೬೮ರ ಮೇರೆಗೆ ಅಲ್ಪಕಾಲಾವಧಿ ಚರ್ಚೆ

ಗುರುಮಿಂಕ್‌ಕಲ್‌ನಲ್ಲಿ ಪೋಲೀಸರಿಂದ ನಡೆದ ದೌರ್ಜನ್ಯದ ಬಗ್ಗೆ

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ ಈ ನಿಲುವಳಿ ಸೂಚನೆಯನ್ನು ಸೌಜನ್ಯದಿಂದ ಈ ಸದನ ಪರಿಗಣಿಸಿಕೊಳ್ಳಬೇಕು, ಇದಕ್ಕೆ ತಪ್ಪು ಒಪ್ಪಿಗೆ ದೊರೆಯಬೇಕು ಎನ್ನುವ ಬಗ್ಗೆ ನಮ್ಮ ವಿರೋಧಪಕ್ಷದ ಉಪನಾಯಕರಾದ ಶ್ರೀಮಾನ್ ಮಲ್ಲಿಕಾರ್ಜುನ ಖಾರ್ಗೆಯವರು ಮಾಡಿದ ಪ್ರಯತ್ನಕ್ಕೆ ಸರ್ಕಾರದವರು ಸೌಜನ್ಯದಿಂದ ಒಪ್ಪಿಕೊಂಡಿದ್ದಕ್ಕೆ ಅಭ್ಯಂತರವೇನೂ ಇಲ್ಲ. ಈ ರೀತಿ ದೌರ್ಜನ್ಯಗಳನ್ನು ಅಧಿಕಾರಿಗಳು ಮಾಡಿದ ಮೇಲೆ ನಾವು ಕೂಡ ಒಪ್ಪುವುದಿಲ್ಲ, ಸರ್ಕಾರವು ಕೂಡ ಒಪ್ಪುವುದಿಲ್ಲ ಎನ್ನುವ ಅಭಿಪ್ರಾಯವನ್ನು ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ಪರವಾಗಿ ಹೇಳಿದ್ದರಿಂದ ಬೇರೆ ನಿಯಮಾವಳಿಯ ಪ್ರಕಾರ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಲು ಪ್ರಯತ್ನ ಮಾಡಿದೆವು ಸುಮಾರಾಗಿ ಇದು ನಡೆದಿರತಕ್ಕಂಥ ಘಟನೆಯ ಸ್ಥಳವನ್ನು ಆ ಸ್ಥಳದವರೇ ಆದ ಶ್ರೀಮಾನ್ ಮಲ್ಲಿಕಾರ್ಜುನ ಖಾರ್ಗೆಯವರು ವಿವರಗಳನ್ನು ಕೊಟ್ಟಿದ್ದಾರೆ. ಅವರು ಹೇಳಿದ ಕ್ಕಿಂತ ಹೆಚ್ಚು ಹೇಳತಕ್ಕಂಥ ಪ್ರಮೇಯ ಬರಲಾರದು ಎಂದು ನಾನು ಭಾವಿಸಿಕೊಂಡಿದ್ದೇನೆ. ಇಲ್ಲಿ ಒಂದು ವಿಚಾರವನ್ನು ನಾವೆಲ್ಲ ಒಪ್ಪಿಕೊಳ್ಳಬೇಕಾಗುತ್ತದೆ. ಇಪತ್ತು ಈ ಒಂದು ಘಟನೆ ನಡೆಯಲು ಕಾರಣ ಏನೋ ಇರಬಹುದು. ಒಂದೊಂದು ಘಟನೆಗೂ ಒಂದೊಂದು ಕಾರಣ ಇದ್ದೇ ಇರುತ್ತದೆ. ಒಂದು ವೇಳೆ ಆ ಕಾರಣ ಅವರಿಗೆ ಸರಿ ಕಂಡಿರಬಹುದು, ಆದರೆ ಆ ಕಾರಣ ಸಮಾಜಕ್ಕೆ ಒಪ್ಪಿಗೆ ಆಗತಕ್ಕ ಕಾರಣ ಆಗಬೇಕು. ಇಪತ್ತು ದೌರ್ಜನ್ಯ ನಡೆದರೆ, ಆ ದೌರ್ಜನ್ಯವನ್ನು ಎರಡು ವಿಧಗಳಲ್ಲಿ ಕಾಣುತ್ತೇವೆ. ಸಮಾಜದಲ್ಲಿರತಕ್ಕ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯ ಮೇಲೆ ಮಾಡತಕ್ಕ ದೌರ್ಜನ್ಯ. ಸರ್ಕಾರ ಅಥವಾ ಅಧಿಕಾರಿಗಳ ಸಂಪರ್ಕ ಇಲ್ಲದಿರತಕ್ಕ ವಿಚಾರ. ಅಥವಾ ಕೆಲವು ವ್ಯಕ್ತಿಗಳ ತಂಡ ಮತ್ತೊಂದು ತಂಡದ ಮೇಲೆ ಮಾಡತಕ್ಕ ದೌರ್ಜನ್ಯಗಳು. ಆ ದೌರ್ಜನ್ಯಗಳನ್ನು ಬೆಂಗಳೂರಿನಲ್ಲಿ ಕಾಣುತ್ತೇವೆ, ಹಳ್ಳಿಗಳಲ್ಲಿ ಮತ್ತು ಬೇರೆ ಬೇರೆ ಕಡೆಗಳಲ್ಲೂ ಕಾಣುತ್ತೇವೆ. ಆ ವಿವರಗಳಿಗೆ ಈಗ ಹೋಗುವುದಿಲ್ಲ. ಈ ದೌರ್ಜನ್ಯವನ್ನು ಯಾವುದೇ ಒಂದು ಆಸ್ಪಿಗೋಸ್ಕರ, ಅಧಿಕಾರಕ್ಕೋಸ್ಕರ ಅಥವಾ ಮತ್ತೊಂದಕ್ಕೆ ಮಾಡಿದರೂ ಕೂಡ ಅದನ್ನು ಸಮಾಜ ಎಂದೂ ಒಪ್ಪುವುದಿಲ್ಲ. ಇಲ್ಲಿ ನಡೆದಿರತಕ್ಕ ದೌರ್ಜನ್ಯ ಅಧಿಕಾರ ಹಿಡಿದ ದೌರ್ಜನ್ಯ. ಯಾವ ಅಧಿಕಾರಿಗಳ ಹಶ್ಶಿರ ಅಧಿಕಾರ ಇಲ್ಲ ಎನ್ನುವುದನ್ನು ನೋಡಿ ಮಾಡಿದ ದೌರ್ಜನ್ಯ. ಭಾರತ ದಂಡ ಸಂಹಿತೆ ಪ್ರಕಾರ ಒಬ್ಬ ವ್ಯಕ್ತಿ ಆತ್ಮ ಸಂರಕ್ಷಣೆ ಮಾಡಿಕೊಳ್ಳತಕ್ಕ ಕಾನೂನು ಇದೆ. ಆ ಮಾತನ್ನು ನಾವೆಲ್ಲಾ ಒಪ್ಪುತ್ತೇವೆ. ಆದರೆ ಅದನ್ನು ನಿರ್ದಿಷ್ಟವಾಗಿ ಇಲ್ಲಿ ಯಾವಾಗ ಪ್ರಯೋಗ ಮಾಡಬೇಕು ತನ್ನ ಆತ್ಮ ಸಂರಕ್ಷಣೆಗೋಸ್ಕರ ಎಂಬ ತಿಳುವಳಿಕೆ ಬೇಕು. ತನ್ನ ಮಾನ ಮತ್ತು ಮಾನಸಿಕವಾಗಿರತಕ್ಕ ಪರಿಸ್ಥಿತಿಯನ್ನು ಕಾಯ್ದುಕೊಳ್ಳುವುದಕ್ಕೋಸ್ಕರ ತಾನು ಯಾವಾಗ ತನ್ನ ಹಕ್ಕನ್ನು ಚಲಾವಣೆ ಮಾಡಬೇಕು ಮತ್ತು ಯಾವಾಗ ನಿಲ್ಲಿಸಬೇಕೆಂಬ ವಿಚಾರದ ಬಗ್ಗೆ ನ್ಯಾಯಾಲಯಗಳು ನ್ಯಾಯವಾದ ರೀತಿಯಲ್ಲಿ ತನ್ನದೇ ಆದ ವ್ಯಾಖ್ಯಾನಗಳನ್ನು ಕೊಟ್ಟಿವೆ. ಅದು ಬಹಳ ಕಷ್ಟ. ಇಂಥ ಒಂದು ಸಂದರ್ಭವನ್ನು ತೆಗೆದುಕೊಂಡು ಈಗ ಚಾಸ್ತಿಯಾಯಿತು, ಕಡಿಮೆಯಾಯಿತು ಎಂಬುದಲ್ಲ. When one has exceeded his right of self-defence ಎನ್ನತಕ್ಕ ವಿಚಾರಗಳು ಬೇರೆ ಬೇರೆ ರೀತಿಯಲ್ಲಿ ಚರ್ಚೆಯಾಗುತ್ತವೆ. ಇಲ್ಲಿರತಕ್ಕ ಪ್ರಶ್ನೆ ಏನೆಂದರೆ ಅಧಿಕಾರ ತನ್ನ ಹತ್ತಿರ ಇದ್ದಾಗ ಅದರ ಜೊತೆಯಲ್ಲಿ ಯಾವಾಗಲೂ ಸಂಯಮ

† ಈ ಚಿಪ್ಪೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.